# ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಳಲ್ಕೆರೆ

## ಸಿ.ಸಿ. ನಂ : 1071/2020

ಸಾಕ್ಷಿದಾರರ ಹೆಸರು : ಬಸವರಾಜ ಪಿಡಬ್ಲ್ಯು:06
ತಂದೆ / ಗಂಡನ ಹೆಸರು : ಮಲ್ಲಪ್ಪ ಸಿಡಬ್ಲ್ಯು:08
ವಯಸ್ಸು : 51 ವರ್ಷ
ಉದ್ಯೋಗ :ಬಂಗಾರದ ವ್ಯಾಪಾರ
ವಾಸಸ್ಥಳ : ಚಿಕ್ಕಜಾಜೂರು ಪ್ರ.ವ.ಬೋ ದಿ. :15.04.2025

## ಮುಖ್ಯ ವಿಚಾರಣೆ : ಮಾನ್ಯ ಎ.ಪಿ.ಪಿ.ಯವರಿಂದ

ಮೃತ 1ನೇ ಆರೋಪಿ ನನಗೆ ಗೊತ್ತಿಲ್ಲ. ಚಾ.ಸಾಃ 6 ಮತ್ತು 7 ಗೊತ್ತಿಲ್ಲ. ಈ ಪ್ರಕರಣದ ವಿಚಾರಗಳಾವವು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ವಿಚಾರಿಸಿಲ್ಲ ಮತ್ತು ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಎಪಿಪಿಯವರು ಪಾಟೀಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿಯನ್ನು ನೀಡಲಾಯಿತು

## ಪಾಟೀಸವಾಲು : ಮಾನ್ಯ ಎಪಿಪಿಯವರಿಂದ

ದಿನಾಂಕಃ04.07.2013 ರಂದು ಮಧ್ಯಾಹ್ನ 2.30 ಗಂಟೆ ಸಮಯದಲ್ಲಿ ನಾನು ನನ್ನ ಅಂಗಡಿಯಲ್ಲಿ ಕೆಲಸ ಮಾಡುತ್ತಿರುವಾಗ ಚಿಕ್ಕಜಾಜೂರು ಪೋಲೀಸರು ಬಂದು ನನ್ನ ಅಂಗಡಿಯಲ್ಲಿದ್ದ ತೂಕ ಮಾಡುವ ಯಂತ್ರದೊಂದಿಗೆ ಚಿಕ್ಕಜಾಜೂರು ಪೋಲೀಸ್ ಠಾಣೆಗೆ ಬರಬೇಕೆಂದು ತಿಳಿಸಿದ ಮೇರೆಗೆ ನಾನು ಅವರ ಜೊತೆಗೆ ಚಿಕ್ಕಜಾಜೂರು ಪೋಲೀಸ್ ಠಾಣೆಗೆ ಹೋದೆನು ಎಂದರೆ ಸರಿಯಲ್ಲ. ಅಲ್ಲಿ ಹೊಳಲ್ಕೆರೆ ಸಿಪಿಐ ಹಾಗೂ 1ನೇ ಆರೋಪಿ ಮತ್ತು ಚಾಸಾಃ6, 7 ರವರು ಹಾಜರಿದ್ದರು ಎಂದರೆ ಸರಿಯಲ್ಲ. ಪೋಲೀಸರು ನನಗೆ 1ನೇ ಆರೋಪಿ ನೀಡಿದ್ದ ಸ್ವ ಇಚ್ಛಾ ಹೇಳಿಕೆಯ ವಿಚಾರ ತಿಳಿಸಿ ಬಂಗಾರದ ಒಡವೆಗಳನ್ನು ತೂಕ ಮಾಡಲು ತಿಳಿಸಿ ನನ್ನನ್ನು ಅವರ ಜೊತೆಗೆ ಸಹಕರಿಸಲು ತಿಳಿಸಿದರು ಎಂದರೆ ಸರಿಯಲ್ಲ. ನಂತರ 1ನೇ ಆರೋಪಿ ಕಳುವು ಮಾಡಿದ್ದ ಒಡವೆಗಳನ್ನು ಇಟ್ಟ ಜಾಗಕ್ಕೆ ನನ್ನನ್ನು, ಪೋಲೀಸರನ್ನು ಪಂಚರನ್ನು ಕರೆದುಕೊಂಡು ಹೋಗಿ ತೋರಿಸಿದನು

ಎಂದರೆ ಸರಿಯಲ್ಲ. ಸ್ಥಳದಲ್ಲಿ ಪಂಚರ ಸಮಕ್ಷಮ ನಾನು ಬಂಗಾರದ ಒಡವೆಗಳನ್ನು ಪರಿಶೀಲಿಸಿ ತೂಕ ಮಾಡಿದೆನು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಈಗ ನೀವು ನನಗೆ ಓದಿ ಹೇಳಿದಂತೆ ನಾನು ಪೋಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿಯ ಅಲ್ಲಗಳೆದ ಹೇಳಿಕೆಯನ್ನು ನಿಪಿಃ 7 ಎಂದು ಗುರುತಿಲಾಯಿತು.

**ಪಾಟೀಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ**

**ಮರು ವಿಚಾರಣೆ ಇಲ್ಲ :**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿಯಿದೆ.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಹೊಳಲ್ಕೆರೆ